

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20-11-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದು ನಾನು ಮೊದಲು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರತ್ ಔಫ್ ಬಿನ್ ಹಾರಿಸ್ ಬಿನ್ ರಿಫಾಅ ಅನ್ಸಾರಿ(ರ) ಎಂದಾಗಿದೆ. ವರದಿಗಳಲ್ಲಿ ಅವರ ಹೆಸರುಗಳು ಔಫ್ ಬಿನ್ ಅಫ್‌ರಾಅ್, ಔಫ್ ಬಿನ್ ಹಾರಿಸ್ ಮತ್ತು ಔಝ್ ಬಿನ್ ಅಫ್‌ರಾಅ್ ಎಂದೂ ಬಂದಿವೆ. ಅವರ ಸಂಬಂಧ ಅನ್ಸಾರಿನ ಗೋತ್ರವಾದ ಬನೂ ನಜ್ಜಾರ್‌ನೊಂದಿಗೆ ಆಗಿತ್ತು. ಹಝ್ರತ್ ಮುಆಝ್(ರ) ಮತ್ತು ಹಝ್ರತ್ ಮುಅವ್ವಿದ್(ರ) ಅವರ ಸಹೋದರರಾಗಿದ್ದರು. ಮಕ್ಕಕ್ಕೆ ಮೊಟ್ಟಮೊದಲು ಬಂದು ಬೈಅತ್ ಮಾಡಿದ್ದ ಆರು ಅನ್ಸಾರರಲ್ಲಿ ಹಝ್ರತ್ ಔಫ್(ರ) ಸೇರಿದ್ದರು. ಅವರು ಅಖಬದಲ್ಲಿ ನಡೆದ ಬೈಅತಿನಲ್ಲೂ ಇದ್ದರು. ಅವರು ಇಸ್ಲಾಂ ಸ್ವೀಕರಿಸಿದ ನಂತರ, ಹಝ್ರತ್ ಅಸದ್ ಬಿನ್ ಝುರಾರ ಮತ್ತು ಹಝ್ರತ್ ಅಮ್ಮಾರ ಬಿನ್ ಹಝ್ಮ್‌ರೊಂದಿಗೆ ಸೇರಿಕೊಂಡು ಬನೂ ಮಾಲಿಕ್ ಬಿನ್ ನಜ್ಜಾರಿನ ವಿಗ್ರಹವನ್ನು ಒಡೆದಿದ್ದರು. ಬದ್ರ್ ಯುದ್ಧದ ದಿನದಂದು, ಯುದ್ಧ ಜಾರಿಯಲ್ಲಿದ್ದಾಗ, ಹಝ್ರತ್ ಔಫ್ ಬಿನ್ ಹಾರಿಸ್ ಹಝ್ರತ್ ಪೈಗಂಬರ್(ಸ)ರೊಂದಿಗೆ ಕೇಳಿದರು: ಯಾ ರಸೂಲಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ, ಅಲ್ಲಾಹನು ತನ್ನ ದಾಸನ ಯಾವ ಕೆಲಸದಿಂದ ಹೆಚ್ಚು ಸಂತೋಷಗೊಳ್ಳುತ್ತಾನೆ? ಹಝ್ರತ್ ಪೈಗಂಬರ್(ಸ) ಹೇಳಿದರು: ದಾಸನ ಕೈ ಯುದ್ಧದಲ್ಲಿ ನಿರತವಾಗಿದ್ದುಕೊಂಡು ರಕ್ಷಾ ಕವಚವಿಲ್ಲದೆ ನಿರ್ಭಯನಾಗಿ ಹೋರಾಟ ನಡೆಸುವುದನ್ನು ಅಲ್ಲಾಹನು ಹೆಚ್ಚು ಇಷ್ಟಪಡುತ್ತಾನೆ. ಆಗ ಹಝ್ರತ್ ಔಫ್ ಬಿನ್ ಅಫ್‌ರಾಅ್(ರ) ತನ್ನ ರಕ್ಷಾಕವಚವನ್ನು ಕಳಚಿದರು ಮತ್ತು ಮುಂದಕ್ಕೆ ಧಾವಿಸಿ ಹೋರಾಡುತ್ತಾ ಶಹೀದ್ ಆದರು. ಹದೀಸ್ ಮತ್ತು ಜೀವನಚರಿತ್ರೆಯ ಗ್ರಂಥಗಳಲ್ಲಿ, ಬದ್ರ್ ಯುದ್ಧದಲ್ಲಿ ಅಬೂ ಜಹಲ್‌ನ ಮೇಲೆ ಹಲ್ಲೆ ನಡೆಸಿದ್ದ ಸಹಾಬರ ಹೆಸರುಗಳಲ್ಲಿ ಔಫ್ ಬಿನ್ ಅಫ್‌ರಾಅ್‌ರ ಹೆಸರು ಸಹ ಇದೆ.

ಇನ್ನು ಪ್ರಸ್ತಾಪಿಸಲಾಗುವ ಸಹಾಬಿಯ ಹೆಸರು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಎಂದಾಗಿದೆ. ಅವರ ಸಂಬಂಧ ಅನ್ಸಾರಿನ ಗೋತ್ರವಾದ ಖಝ್ರಜಿನ ಶಾಖೆ ಬನೂ ನಜ್ಜಾರ್‌ನೊಂದಿಗೆ ಆಗಿತ್ತು. ಅವರು ಅಖಬ ಸಾನಿಯ ಸಂದರ್ಭದಲ್ಲಿ ಎಪ್ಪತ್ತು ಅನ್ಸಾರ್‌ರೊಡನೆ ಬೈಅತ್ ಮಾಡಲು ಸೌಭಾಗ್ಯವನ್ನು ಪಡೆದಿದ್ದರು. ಹಝ್ರತ್ ಪೈಗಂಬರ್(ಸ) ಹಿಜ್ರತ್ ಮಾಡಿ ಮದೀನಕ್ಕೆ ಹೋದಾಗ, ಮಸ್ಜಿದ್ ನಬವೀ ಮತ್ತು ಅವರ ಮನೆಯ ನಿರ್ಮಾಣದ ವರೆಗೆ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮನೆಯಲ್ಲಿ ನೆಲೆಸಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮದೀನದಲ್ಲಿ ಪ್ರವೇಶಿಸಿದಾಗ, ಹಝ್ರತ್ ಪೈಗಂಬರ್(ಸ) ತಮ್ಮ ಮನೆಯಲ್ಲಿ ತಂಗಬೇಕೆಂದಾಗಿತ್ತು ಪ್ರತಿಯೊಬ್ಬರ ಅಭಿಲಾಷೆ. ಹಝ್ರತ್ ಪೈಗಂಬರ್(ಸ)ರ ಒಂಟೆ ಯಾವ ಯಾವ ಗಲ್ಲಿಗಳಿಂದ ದಾಟಿ ಹೋಗುತ್ತಿತ್ತೋ ಆ ಗಲ್ಲಿಯ ಕುಟುಂಬದವರು ತಮ್ಮ ಮನೆಗಳ ಮುಂದೆ ನಿಂತುಕೊಂಡು ಹಝ್ರತ್ ಪೈಗಂಬರ್(ಸ)ರನ್ನು ಸ್ವಾಗತಿಸುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: ಯಾ ರಸೂಲಲ್ಲಾಹ್, ಇದು ನಮ್ಮ ಮನೆಯಾಗಿದೆ. ಇವು ನಮ್ಮ ಸಂಪತ್ತಾಗಿವೆ. ಇವು ನಮ್ಮ ಜೀವಗಳಾಗಿವೆ. ಇವೆಲ್ಲವೂ ನಿಮ್ಮ ಸೇವೆಗಾಗಿ ಹಾಜರಾಗಿವೆ. ಯಾ ರಸೂಲಲ್ಲಾಹ್, ನಾವು ನಿಮ್ಮನ್ನು ಸಂರಕ್ಷಿಸಲು ಯೋಗ್ಯರೂ ಸಮರ್ಥರೂ ಆಗಿದ್ದೇವೆ. ನೀವು ನಮ್ಮ ಬಳಿಯೇ ತಂಗಿರಿ ಎಂದು ಹೇಳುತ್ತಿದ್ದರು. ಕೆಲವರು ಆವೇಶದಿಂದ ಮುಂದಕ್ಕೆ ಬಂದು ಹಝ್ರತ್ ಪೈಗಂಬರ್(ಸ)ರನ್ನು ತಮ್ಮ ಮನೆಗಳಿಗೆ ಕರೆಸಲು ಹಝ್ರತ್ ಪೈಗಂಬರ್(ಸ)ರ ಒಂಟೆಯ ಲಗಾಮನ್ನು ಹಿಡಿದಿಡುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಪ್ರತಿಯೊಬ್ಬರೊಡನೆ ಹೀಗೆ ಹೇಳುತ್ತಿದ್ದರು: ನನ್ನ ಒಂಟೆಯನ್ನು ಬಿಟ್ಟುಬಿಡಿರಿ. ಇಂದು ಇದು ಅಲ್ಲಾಹನ ಆದೇಶದ ಪ್ರಕಾರ ನಡೆಯುತ್ತಿದೆ. ಅಲ್ಲಾಹನು ಇಚ್ಛಿಸುವಲ್ಲೇ ಇದು ನಿಲ್ಲುವುದು. ಕೊನೆಗೆ ಅದು ಮದೀನದ ಒಂದು ಬದಿಯಲ್ಲಿ ಬನೂ ನಜ್ಜಾರಿನ ಅನಾಥರ ಒಂದು ಜಮೀನಿನ ಸಮೀಪಕ್ಕೆ ಹೋಗಿ ನಿಂತಿತು. ಹಝ್ರತ್ ಪೈಗಂಬರ್(ಸ) ಆ ಜಾಗದಲ್ಲಿ ಮಸೀದಿ ಮತ್ತು ತನ್ನ ಮನೆಯನ್ನು ಕಟ್ಟಲು ತೀರ್ಮಾನಿಸಿದರು. ಆ ಪ್ರದೇಶಕ್ಕೆ ಅತಿ ಹತ್ತಿರವಿರುವ ಮನೆ ಯಾರದ್ದು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮುಂದೆ ಬಂದು ಹೇಳಿದರು: ಯಾ ರಸೂಲಲ್ಲಾಹ್, ನನ್ನ ಮನೆ ಎಲ್ಲರಿಗಿಂತ ಹತ್ತಿರವಿದೆ ಮತ್ತು ಅದನ್ನು ನಿಮ್ಮ ಸೇವೆಗಾಗಿ ಹಾಜರು ಪಡಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಮನೆಗೆ ಹೋಗಿರಿ, ನನಗೆ ಯಾವುದಾದರೂ ಕೊಠಡಿಯನ್ನು ಸರಿಪಡಿಸಿ ಇಡಿರಿ. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ(ರ) ಮನೆ ಎರಡು ಅಂತಸ್ತಿನದ್ದಾಗಿತ್ತು. ಮೇಲಿನ ಮಹಡಿಯಲ್ಲಿ ತಂಗಲು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಪೈಗಂಬರ್(ಸ)ರಿಗೆ ಸಲಹೆ ನೀಡಿದರು. ಆದರೆ, ಭೇಟಿಯಾಗಲು ಬರುವವರಿಗೆ ತೊಂದರೆಯಾದೀತು ಎಂದು ಯೋಚಿಸಿ ಕೆಳಗಿನ ಭಾಗವನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟರು.

ಅನ್ಸಾರರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಅತಿಯಾದ ಪ್ರೀತಿಯ ಪ್ರಕಟಣೆ ಈ ಸಂದರ್ಭದಲ್ಲೂ ಕಾಣಬಹುದಾಗಿತ್ತು. ಹಝ್ರತ್ ಪೈಗಂಬರ್(ಸ)ರ ಒತ್ತಾಯದ ಕಾರಣದಿಂದ ಅವರನ್ನು ಕೆಳಗಿನ ಭಾಗದಲ್ಲಿ ಇರಲು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ತಯಾರಾದರು. ಆದರೆ ಹಝ್ರತ್ ಪೈಗಂಬರ್(ಸ) ಕೆಳಗಿನ ಭಾಗದಲ್ಲಿ ಮಲಗುತ್ತಿರುವಾಗ, ಮೇಲಿನ ಮಹಡಿಯಲ್ಲಿ ಮಲಗುವುದು ಅಪಮರ್ಯಾದೆಯಾಗಿದೆ ಎಂಬ ಚಿಂತೆಯಿಂದ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮತ್ತು ಅವರ ಪತ್ನಿ ರಾತ್ರಿ ಪೂರ್ತಿ ಮಲಗದೇ ಎಚ್ಚೆತ್ತಿದ್ದರು. ಇದಾಗಿತ್ತು ಅವರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೀತಿ. ರಾತ್ರಿ ಸಮಯದಲ್ಲಿ, ನೀರಿನ ಒಂದು ಪಾತ್ರೆ ಮಗುಚಿ ಬಿತ್ತು. ಕೆಳಗಿನ ಅಂತಸ್ತಿಗೆ ನೀರು ಸೋರಿ ಹೋಗದಿರಲು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಕೂಡಲೇ ತನ್ನ ಹಾಸಿಗೆಯನ್ನು ಆ ನೀರಿನ ಮೇಲೆ ಹಾಕಿಕೊಂಡು ಅದರ ತೇವವನ್ನು ಒಣಗಿಸಿದರು. ಬೆಳಿಗ್ಗೆಯಾದಾಗ, ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಪೂರ್ತಿ ಸ್ಥಿತಿಗತಿಗಳನ್ನು ವಿವರಿಸಿದರು. ಇದನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಮೇಲಿನ ಮಹಡಿಗೆ ಹೋಗಲು ಒಪ್ಪಿದರು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಪೈಗಂಬರ್(ಸ)ರಿಗೆ ಊಟ ತಯಾರು ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ)ರ ಬಳಿಯಿಂದ ಅವರಿಗೆ ಉಳಿದ ಊಟ ವಾಪಾಸ್ಸು ತರಲಾಗುವಾಗ, ಹಝ್ರತ್ ಪೈಗಂಬರ್(ಸ) ಊಟ ಮಾಡಿದ್ದ ಅದೇ ಜಾಗದಿಂದ ಅವರು ಊಟ ಮಾಡುತ್ತಿದ್ದರು. ಅವರು ಒಂದು ಸಲ ತಯಾರು ಮಾಡಿಸಿದ ಊಟದಲ್ಲಿ ಬೆಳ್ಳುಳ್ಳಿ ಹಾಕಲಾಗಿತ್ತು. ಹಝ್ರತ್ ಪೈಗಂಬರ್(ಸ) ಊಟ ಮಾಡಲಿಲ್ಲ. ಆಗ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಚಿಂತಿತರಾದರು ಮತ್ತು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಿ ಬೆಳ್ಳುಳ್ಳಿ ತಿನ್ನುವುದು ನಿಷಿದ್ಧವೇ ಎಂದು ಕೇಳಿದರು. ಹಝ್ರತ್ ಪೈಗಂಬರ್(ಸ), ಅಲ್ಲ, ಆದರೆ ನನಗೆ ಅದು ಇಷ್ಟವಲ್ಲ ಎಂದು ಹೇಳಿದರು. ಆಗ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದರು: ನೀವು ಇಷ್ಟಪಡದ್ದನ್ನು ನಾನೂ ಇಷ್ಟಪಡುವುದಿಲ್ಲ. ಮುಸ್ನದ್ ಅಹ್ಮದ್ ಬಿನ್ ಹಂಬಲಿನ ಮತ್ತೊಂದು ವರದಿಯಲ್ಲಿ ಬೆಳ್ಳುಳ್ಳಿಗೆ ಬದಲಾಗಿ ಈರುಳ್ಳಿಯೆಂದು ಬಂದಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಬಳಿ ಬರುತ್ತಿರುವ ದೇವದೂತನ ಕಾರಣದಿಂದ ನಾನು ಅದನ್ನು ತಿನ್ನುವುದನ್ನು ಇಷ್ಟಪಡಲಿಲ್ಲ. ಆದರೆ ನೀವು ಅದನ್ನು ತಿನ್ನಿರಿ.

ಹಝ್ರತ್ ಪೈಗಂಬರ್(ಸ)ರೊಂದಿಗೆ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಗೆ(ರ) ಬದ್ರ್ ಯುದ್ಧ, ಉಹದ್ ಯುದ್ಧ, ಖಂದಕ್ ಯುದ್ಧ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು. ಒಂದು ಸಂದರ್ಭದಲ್ಲಿ, ಅವರು ಹಝ್ರತ್ ಪೈಗಂಬರ್(ಸ)ರ ಡೇರೆಯ ಹೊರಗೆ ಖಡ್ಗವನ್ನು ಕೈಯಲ್ಲಿ ಹಿಡಿದುಕೊಂಡು ರಾತ್ರಿ ಪೂರ್ತಿ ಕಾವಲು ನಿಂತಿದ್ದರು. ಹಝ್ರತ್ ಪೈಗಂಬರ್(ಸ)ರಿಗೆ ಇದರ ಅರಿವಾದಾಗ, ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಇಹ್‌ಫಝ್ ಅಬಾ ಅಯ್ಯೂಬ ಕಮಾ ಬಾತ ಯಹ್‌ಫಝುನೀ.** ಎಂದರೆ, ಹೇ ಅಲ್ಲಾಹ್, ಯಾವ ರೀತಿಯಲ್ಲಿ ಅಬೂ ಅನ್ಸಾರಿ ನನಗೆ ಕಾವಲು ನಿಲ್ಲುತ್ತಾ ರಾತ್ರಿ ಪೂರ್ತಿ ಕಳೆದರೋ ಅದೇ ರೀತಿಯಲ್ಲಿ ಅವರನ್ನು ಸಹ ನೀನು ಸಂರಕ್ಷಿಸು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಯಾರು ತಾಯಿ ಮತ್ತು ಮಗನ ನಡುವೆ ಬಿರುಕು (ಅಗಲುವಿಕೆ) ಉಂಟುಮಾಡುತ್ತಾನೋ, ಅಲ್ಲಾಹನು ಅವನ ಮತ್ತು ಅವನ ಆಪ್ತರ ನಡುವೆ ಖಿಯಾಮತ್ ದಿನದಂದು ಒಡಕನ್ನು ಉಂಟುಮಾಡುವನು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹೇಳಿದ್ದಾಗಿ ಹಝ್ರತ್ ಮರ್ಸದ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಮಗ್‌ರಿಬ್ ನಮಾಝ್ ಅನುಷ್ಠಿಸುವುದರಲ್ಲಿ ತಡಮಾಡದ ತನಕ ನನ್ನ ಉಮ್ಮತ್ ಉತ್ತಮ ಸ್ಥಿತಿಯಲ್ಲಿ ಅಥವಾ ಸಹಜ ಸ್ಥಿತಿಯಲ್ಲಿ ಇರುವುದು. ಎಂದರೆ, ಮಗ್‌ರಿಬ್ ನಮಾಝ್ ತಡಮಾಡದೇ ನಿರ್ವಹಿಸಬೇಕು. ಅಬೂ ವಾಸಿಲ್ ವರದಿ ಮಾಡುತ್ತಾರೆ: ನಾನು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯನ್ನು(ರ) ಭೇಟಿಯಾದೆನು. ಅವರು ನನಗೆ ಹಸ್ತಲಾಘವ ಮಾಡಿದರು. ನನ್ನ ಉಗುರುಗಳು ಉದ್ದವಾಗಿರುವುದನ್ನು ಅವರು ಕಂಡರು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದನ್ನು ಅವರು ನನಗೆ ಹೇಳಿಕೊಟ್ಟರು: ಕೆಲವರಾದರೋ ಅಧ್ಯಾತ್ಮಿಕ ಸಂಗತಿಗಳ ಬಗ್ಗೆ ಪ್ರಶ್ನಿಸುತ್ತಿರುತ್ತಾರೆ, ಆದರೆ ಅವರು ಉಗುರುಗಳನ್ನು ಪಕ್ಷಿಗಳ ಹಾಗೆ ಉದ್ದವಾಗಿ ಬೆಳೆಸುತ್ತಾರೆ. ಅವುಗಳಲ್ಲಿ ಅಶುದ್ಧತೆ, ಮಾಲಿನ್ಯ ಮತ್ತು ಕೊಳೆಗಳು ಒಟ್ಟುಗೂಡಿರುತ್ತವೆ. ಆದ್ದರಿಂದ ಉಗುರುಗಳನ್ನು ಕತ್ತರಿಸಿರಿ.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ ಶ್ರೇಷ್ಠತೆ ಮತ್ತು ಉತ್ಕೃಷ್ಟತೆ ಎಷ್ಟು ದೃಢಪಟ್ಟ ಸಂಗತಿಯಾಗಿತ್ತೆಂದರೆ, ಸಹಾಬಿಯರು ಸಹ ಅವರಿಂದ ಸಮಸ್ಯೆಗಳ ಪರಿಹಾರಗಳನ್ನು ಕೇಳುತ್ತಿದ್ದರು. ಅವರ ಮರಣ ಸಮೀಪವಾದಾಗ, ಅವರು ಜನರೊಡನೆ ಹೇಳಿದರು: ನಾನು ಹಝ್ರತ್ ಪೈಗಂಬರ್(ಸ)ರಿಂದ ಆಲಿಸಿದ್ದ ಒಂದು ಹದೀಸನ್ನು ನಿಮ್ಮೊಡನೆ ಹೇಳುತ್ತೇನೆ. ನನ್ನ ಮರಣ ಸಮೀಪವಾಗಿರದಿದ್ದರೆ, ನಾನು ಅದನ್ನು ಹೇಳುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ನಾನು ಕೇಳಿದ್ದೇನೆ. ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದೇ ಮರಣಗೊಳ್ಳುವವನು ಸ್ವರ್ಗಕ್ಕೆ ಪ್ರವೇಶಿಸುವನು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಮುಸ್ಲಿಮರ ಯಾವುದೇ ಯುದ್ಧದಲ್ಲಿ ಹಿಂದೆ ಉಳಿದಿರಲಿಲ್ಲ. ಒಂದೇ ಸಮಯದಲ್ಲಿ ಎರಡು ಯುದ್ಧಗಳು ನಡೆಯುತ್ತಿದ್ದಾಗ, ಅವರು ಯಾವುದಾದರೂ ಒಂದರಲ್ಲಿ ಭಾಗಿಯಾಗಿರುತ್ತಿದ್ದರು. ಒಂದು ಯುದ್ಧದ ವೇಳೆ ಅವರು ರೋಗಿಯಾಗಿದ್ದರು. ಸೈನ್ಯದಲ್ಲಿ ಯಝೀದ್ ಬಿನ್ ಮುಆವಿಯ ಅಮೀರ್ ಆಗಿದ್ದರು. ಅವರು

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ ಬಳಿಗೆ ಬಂದು ಕೇಳಿದರು: ನಿಮಗೆ ಏನಾದರೂ ಆವಶ್ಯಕತೆಯಿರುವುದಾದರೆ ಹೇಳಿರಿ. ಅವರು ಹೇಳಿದರು: ನನ್ನ ಆವಶ್ಯಕತೆಯೇನೆಂದರೆ, ನನ್ನ ಮರಣದ ನಂತರ, ನನ್ನನ್ನು ಸವಾರಿಯಲ್ಲಿರಿಸಿಕೊಂಡು ನಿಮಗೆ ಸಾಧ್ಯವಿರುವಷ್ಟು ದೂರಕ್ಕೆ ಶತ್ರುಗಳ ದೇಶದ ಕಡೆಗೆ ಕೊಂಡುಹೋಗಿರಿ. ಅಲ್ಲೇ ದಫನ್ ಮಾಡಿ ವಾಪಾಸ್ಸು ಬನ್ನಿರಿ. ಹಝ್ರತ್ ಅಬೂ ಅನ್ಸಾರಿ(ರ) ನಿಧನರಾದಾಗ, ಯಝೀದ್ ಬಿನ್ ಮುಆವಿಯ ಅವರನ್ನು ಸವಾರಿ ಮೇಲೇರಿಸಿ ಸಾಧ್ಯವಾಗುವಷ್ಟು ದೂರಕ್ಕೆ ಶತ್ರುಗಳ ದೇಶದೊಳಗೆ ಕೊಂಡುಹೋದರು. ಅಲ್ಲೇ ದಫನ್ ಮಾಡಿ ಮರಳಿ ಬಂದರು.

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಹಝ್ರತ್ ಪೈಗಂಬರ್(ಸ)ರ ವಫಾತಿನ ನಂತರ, ತನ್ನ ಮರಣದ ವರೆಗೆ ಎಲ್ಲ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಒಂದು ವರದಿಯ ಪ್ರಕಾರ, ಹಿಜರೀ 52ರಲ್ಲಿ, ಇಸ್ತಾಂಬುಲಿನ ಯುದ್ಧದಲ್ಲಿ ಅವರು ನಿಧನರಾದರು ಎಂದಿದೆ. ಯಝೀದ್ ಬಿನ್ ಮುಆವಿಯ ಅವರ ಜನಾಝ ನಮಾಝ್ ನಿರ್ವಹಿಸಿದರು. ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯ ಗೋರಿ ತುರ್ಕಿಯ ಪಟ್ಟಣವಾದ ಇಸ್ತಾಂಬುಲಿನಲ್ಲಿ ಇದೆ. ತುರ್ಕಿಯ ಹೆಚ್ಚಿನ ಜನರು ಮನಸ್ಸಮಾಧಾನಕ್ಕಾಗಿ ಅಲ್ಲಿಗೆ ಭೇಟಿ ನೀಡುತ್ತಾರೆ.

ಇಲ್ಲಿಗೆ ಬದರೀ ಸಹಾಬರ ಪ್ರಸ್ತಾಪ ಮುಗಿಯಿತು. ಆದರೆ ನಾಲ್ವರು ಖಲೀಫರ ಬಗ್ಗೆಗಿನ ಪ್ರಸ್ತಾಪ ವಿವರಿಸಲಿರುವೆನು – ಇನ್‌ಶಾಅಲ್ಲಾಹ್. ಅದೇ ರೀತಿಯಲ್ಲಿ ಆರಂಭದಲ್ಲಿ ಕೆಲವು ಸಹಾಬರ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸಲಾಗಿತ್ತು. ಅವರ ಬಗ್ಗೆ ಇನ್ನು ಹೆಚ್ಚಿನ ವಿಷಯಗಳು ಲಭಿಸಿದರೆ ಅವುಗಳನ್ನು ಸಹ ವಿವರಿಸುವೆನು.

(ಅನಂತರ ಹುಝೂರ್, ಭಾರತದ ಮುಅಲ್ಲಿಮರಾದ ಸನ್ಮಾನ್ಯ ಅಬ್ದುಲ್ ಹಯ್ಯ್ ಮಂಡಲ್ ಸಾಹಿಬ್, ಸನ್ಮಾನ್ಯ ಸಿರಾಜುಲ್ ಇಸ್ಲಾಂ ಸಾಹಿಬ್, ಹಝ್ರತ್ ಮಸೀಹ್ ಮೌಊದ್(ಅ)ರ ಮೊಮ್ಮಗನೂ, ಹಝ್ರತ್ ಅಮತುಲ್ ಹಫೀಝ್ ಬೇಗಂ ಸಾಹಿಬರ(ರ) ಮಗನೂ ಆದ ಸನ್ಮಾನ್ಯ ಶಾಹಿದ್ ಅಹ್ಮದ್ ಖಾನ್ ಪಾಷಾ ಸಾಹಿಬ್, ಮತ್ತು ಸಯ್ಯದ್ ಮಸ್ಊದ್ ಅಹ್ಮದ್ ಶಾಹ್ ಸಾಹಿಬರ ಬಗ್ಗೆ ಪ್ರಸ್ತಾಪಿಸಿ ಅವರೆಲ್ಲರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ؕ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis***$^{(atba)}$

*At, Masjid Mubarak, Islamabad, Tilford, UK, On 20-11-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon